2. ಇದ್ದಲ್ಲಿ, ಆ ರೋಗದ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;
3. ಬಿಜಾಪುರ ಜಿಲ್ಲೆಯಲ್ಲಿ ಏಡ್ಸ್ ರೋಗಿಗಳು ಇರುವರೆ;
4. ಇದ್ದಲ್ಲಿ, ಆ ರೋಗದ ನಿಯಂತ್ರಣಕ್ಕೆ ಆ ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

1. ಹೌದು
2. 1. ಸರ್ಕಾರವು ರಾಜ್ಯದಲ್ಲಿ ಪರಿಪೂರ್ಣವಾದ ಒಂದು ರೋಗ ಸರ್ವಲೈನ್ಸ್ ಕೇಂದ್ರವನ್ನು ಮತ್ತು ನಾಲ್ಕು ವಿಭಾಗೀಯ ರಕ್ತ ಪರೀಕ್ಷಾ ಕೇಂದ್ರಗಳನ್ನು ಸ್ಥಾಪನೆ ಮಾಡಿದೆ.
   2. ಆರೋಗ್ಯ ಶಿಕ್ಷಣ ಮಾಧ್ಯಮದಿಂದ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ಜಾಗೃತಿ ಮೂಡಿಸಲಾಗಿದೆ.
   3. ವೈದ್ಯ ಮತ್ತು ವೈದ್ಯೇತರುಗಳಿಗೆ ತರಬೇತಿ ನೀಡಲಾಗುತ್ತಿದೆ.
   4. ಪ್ರತಿಯೊಂದು ರಕ್ತದ ಯೂನಿಟ್ ಮತ್ತು ರಕ್ತೋತ್ಪನ್ನಗಳನ್ನು ಪರೀಕ್ಷಿಸಲಾಗುವುದು.
   5. ವಿದೇಶಿಯರು ಮತ್ತು ಇತರ ಲೈಂಗಿಕ ಸಂಪರ್ಕವುಳ್ಳವರಿಂದ ರಕ್ತ ಮಾದರಿಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುವುದು.
   6. 1992 – 93ನೇ ಸಾಲಿನ ಆಯವ್ಯಯದಲ್ಲಿ 177ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.
   7. ಕೇಂದ್ರ ಸರ್ಕಾರ 1982ರ ಫೆಬ್ರವರಿ ಮಾಹೆಯಲ್ಲಿ 27.05 ಲಕ್ಷ ರೂ.ಗಳಳನ್ನು ವೈದ್ಯರು ಮತ್ತು ವೈದ್ಯೇತರ ಸಿಬ್ಬಂದಿ ವರ್ಗಕ್ಕೆ ತರಬೇತಿ ನೀಡಲು ಮತ್ತು ವಲಯ ರಕ್ತ ಪರೀಕ್ಷಾ ಕೇಂದ್ರಗಳನ್ನು ಬಲಪಡಿಸಲು ಬಿಡುಗಡೆ ಮಾಡಿದೆ.
   8. ವಿಶ್ವ ಬ್ಯಾಂಕಿನ ಧನ ಸಹಾಯದಿಂದ 4 ವಲಯ ರಕ್ತ ಪರೀಕ್ಷಾ ಕೇಂದ್ರಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿವೆ.
   9. ಹೊಸದಾಗಿ 3 ವಲಯ ರಕ್ತ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
   10. ಏಡ್ಸ್ ಕೋಶವನ್ನು ಸ್ಥಾಪನೆ ಮಾಡುವ ವಿಷಯವು ಪರಿಶೀಲನೆಯಲ್ಲಿದೆ.
   11. ರೋಗ ಲಕ್ಷಣಗಳಿಗೆ ಅನುಗುಣವಾಗಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗಿದೆ.
   12. ರಕ್ತ ನಿಧಿ ಕೇಂದ್ರಗಳನ್ನು ಆಧುನೀಕರಣ ಮತ್ತು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು.
3. ಹೌದು
4. 1. ಅವರನ್ನು ಮತ್ತು ಅವರ ಸಂಬಂಧಿಕರುಗಳನ್ನು ಗುರುತಿಸಲಾಗಿದೆ.
   2. ಇವರುಗಳನ್ನು ಆಗಾಗ ಭೇಟಿ ಮಾಡಿ ಅವಶ್ಯವಿದ್ದಾಗ ಪರೀಕ್ಷೆ ಮಾಡಲು ಆಯಾ ಕ್ಷೇತ್ರದ ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗಕ್ಕೆ ಕಟ್ಟುನಿಟ್ಟಾದ ಆದೇಶ ನೀಡಲಾಗಿದೆ.
   3. ಇವರಿಗೆ ಆರೋಗ್ಯ ಶಿಕ್ಷಣವನ್ನು ಕೂಡ ಕೊಡಲಾಗಿದೆ.
   4. ಅವರುಗಳ ಚಲನವಲನ ಮತ್ತು ಚಟುವಟಿಕೆಗಳ ಬಗ್ಗೆ ತಿಳುವಳಿಕೆ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮ

1048. ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಆಸ್ತಿತ್ವದಲ್ಲಿದೆಯೇ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಆ) ಬಿಜಾಪುರ ಜಿಲ್ಲೆಯ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ಕೊಳವೆಬಾವಿಗಳ ಬಾವಿಗಾಗಿ ಎಷ್ಟು ಅರ್ಜಿಗಳು ಬಂದಿರುವುವು;

ಇ) ಅವುಗಳಲ್ಲಿ ಬಾದಾಮಿ ತಾಲ್ಲೂಕಿನಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟು;
ಈ) ಈ ಅರ್ಜಿಗಳು ನಿಗಮದಲ್ಲಿ ಎಷ್ಟು ಸಮಯದಿಂದ ಬಾಕಿ ಉಳಿದಿರುವುವು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಹೌದು. ನಿಗಮವು ರಾಜ್ಯದ ಎಲ್ಲಾ 20 ಜಿಲ್ಲೆಗಳಲ್ಲಿಯೂ ಜಿಲ್ಲಾ ಕಛೇರಿಯನ್ನು ಹೊಂದಿದೆ.
ಆ) 1991–92ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 525 ಅರ್ಜಿಗಳನ್ನು ದಿನಾಂಕ 26.2.92 ರವರೆಗೆ ಸ್ವೀಕರಿಸಲಾಗಿದೆ.
ಇ) 8 ಅರ್ಜಿಗಳು
ಈ) ಈ ಅರ್ಜಿಗಳನ್ನು ಜಿಲ್ಲಾ ಕಛೇರಿಯಲ್ಲಿ ಜನವರಿ 92 ರಲ್ಲಿ ಸ್ವೀಕೃತವಾಗಿದ್ದು ಇವುಗಳನ್ನು ಕರ್ನಾಟಕ ಕೃಷಿ ಕೈಗಾರಿಕಾ ನಿಗಮಕ್ಕೆ ಜಲಬಿಂದು ಗುರುತಿಸಲು ನೀಡಲಾಗಿದೆ. ಇದರ ಜೊತೆಗೆ ಹಿಂದಿನ ವರ್ಷಗಳಲ್ಲಿ ಬಂದ 239 ಅರ್ಜಿಗಳನ್ನು ಕೂಡ ಕರ್ನಾಟಕ ಕೃಷಿ ಕೈಗಾರಿಕಾ ನಿಗಮಕ್ಕೆ ಜಲಬಿಂದು ಗುರುತಿಸಲು ಕಳುಹಿಸಲಾಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳು.

1050. ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು?
ಆ) ಹೊನ್ನಾವರ ಭಟ್ಕಳ ತಾಲ್ಲೂಕುಗಳಲ್ಲಿ ವೈದ್ಯರಿಲ್ಲದ ಆಸ್ಪತ್ರೆಗಳು ಯಾವುವು?
ಇ) 1991 ಜೂನ್ 30 ರ ನಂತರ ಎಷ್ಟು ವೈದ್ಯರನ್ನು ಜಿಲ್ಲೆಯ ಹೊರಗೆ ವರ್ಗಾಯಿಸಲಾಗಿದೆ ಹಾಗೂ ಯಾವ ಆಸ್ಪತ್ರೆಗಳಿಂದ ವರ್ಗಾಯಿಸಲಾಯಿತು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) 29
ಆ) ಭಟ್ಕಳ ತಾಲ್ಲೂಕಿನ ಹೊಸಾಡ್ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಮಾತ್ರ.
ಇ) 12 ವೈದ್ಯರನ್ನು ವರ್ಗಾಯಿಸಲಾಗಿದೆ.

1.	ಪ್ರಾಥಮಿಕ ಆರೋಗ್ಯ ಕೇಂದ್ರ,	ಕ್ಯಾದಗಿ
2.	ಸಾರ್ವಜನಿಕ ಆಸ್ಪತ್ರೆ, ಸಿರ್ಸಿ	2
3.	ಪ್ರಾಥಮಿಕ ಆರೋಗ್ಯ ಕೇಂದ್ರ,	ವಜ್ರಹಳ್ಳಿ.
4.	ಜಿಲ್ಲಾ ಆಸ್ಪತ್ರೆ, ಕಾರವಾರ	2
5.	ಪ್ರಾಥಮಿಕ ಆರೋಗ್ಯ ಕೇಂದ್ರ ,	ಬಳಕೂರ್
6.	ಪ್ರಾಥಮಿಕ ಆರೋಗ್ಯ ಕೇಂದ್ರ,	ಆಮ್ಡಳ್ಳಿ.
7.	ಪ್ರಾಥಮಿಕ ಆರೋಗ್ಯ ಕೇಂದ್ರ,	ಹಿರೇಗುತ್ತಿ.
8.	ಪ್ರಾಥಮಿಕ ಆರೋಗ್ಯ ಕೇಂದ್ರ,	ರಾಮನಗರ.
9.	ಪ್ರಾಥಮಿಕ ಆರೋಗ್ಯ ಕೇಂದ್ರ,	ಸಿದ್ದಾಪೂರ.
10.	ಪ್ರಾಥಮಿಕ ಆರೋಗ್ಯ ಕೇಂದ್ರ,	ಬಂಕಿಕೊಡ್ಲ.